ಶ್ರೀ ಎನ್. ರಾಚಯ್ಯ : ಎಲ್ಲಿ ಬೋರ್‌ವೆಲ್ ಇರುವುದಿಲ್ಲ ಅಲ್ಲಿ ಓಪನ್‌ವೆಲ್ ಮಾಡುವುದಕ್ಕೆ ಅವಕಾಶವಿದೆ.

* AMOUNT SPENT BY GOVERNMENT DURING 1971-72, 1972-73 AND 1973-74.

210. SRI T. R. SHAMANNA (Fort)—

Will the Minister for Finance and Housing be pleased to state :—

(*a*) the total amount spent (a) on establishment (b) on development activities (c) for payment of interest of several loans borrowed, including advance taken from Reserve Bank of India during 1971-72 1972-73 and 1973-74 ;

(*b*) the amount saved by Government by enforcing economy measures during the above periods ?

SRI M. Y. GHORPADE. (Minister for Finance and Housing)—

(*a*) The total amount spent are indicated below :

	1971-72	*1972-73*	*1973-74*
	(Rs. in crores)		
(a) Establishment	76-81	90.74	102.16
(b) Development activities	220.08	250.46	265.53
(c) Interest payments	25.24	25.83	30.52

(*b*) No precise estimate of the savings is possible.

ಶ್ರೀ ಟಿ. ಆರ್. ಶಾಮಣ್ಣ :—ತಾವು ಕೊಟ್ಟಿರತಕ್ಕ ಮೂರು ವರ್ಷಗಳ ಅಂಕಿಗಳ ಪ್ರಕಾರ ಅಭಿವೃದ್ಧಿಗಾಗಿ ಖರ್ಚು ಮಾಡತಕ್ಕ ಹಣ ಮತ್ತು ಸಿಬ್ಬಂದಿಗಾಗಿ

ಖರ್ಚುಮಾಡತಕ್ಕ ಹಣವನ್ನು ಹೋಲಿಸಿ ನೋಡಿದರೆ ಸಿಬ್ಬಂದಿಯ ಖರ್ಚು ಜಾಸ್ತಿಯಾಗುತ್ತಾ ಇದೆ, ಅಭಿವೃದ್ಧಿ ಕಾರ್ಯಗಳು ಕುಟಿಲವಾಗುತ್ತಿವೆ. ಹಣ ಸಾಲದು ಎಂದು ಅನೇಕ ಇಲಾಖೆಗಳಲ್ಲಿ ಕೆಲಸ ಮಾಡದೆ ಇರತಕ್ಕ ನೌಕರರು ಇದ್ದಾರೆನ್ನುವುದು ಸರ್ಕಾರದ ಗಮನಕ್ಕೆ ಬಂದಿದೆಯೇ, ಹಾಗಿದ್ದರೆ ಸಂಬಂಧಪಟ್ಟ ಇಲಾಖೆಯ ವರ್ಕ್ ಲೋಡ್‌ಗೆ ಇರತಕ್ಕಂಥ ಸಿಬ್ಬಂದಿ ಬಹಳ ಕಡಿಮೆ ಇದೆಯೆನ್ನುವುದನ್ನು ನೋಡಿದ್ದೀರಾ ? ಇದರ ಬಗ್ಗೆ ಏನಾದರೂ ಕಾರ್ಯಕ್ರಮ ತೆಗೆದು ಕೊಳ್ಳುತ್ತೀರಾ ?

‡ಶ್ರೀ ಎಂ. ಮೈ. ಘೋರ್ಪಡೆ :—ಸಿಬ್ಬಂದಿಯ ಮೇಲೆ ಖರ್ಚಾಗುವ ಹಣ ಅಷ್ಟೇನೂ ಜಾಸ್ತಿಯಾಗಿಲ್ಲ. ಕಳೆದ ನಾಲ್ಕೈದು ವರ್ಷಗಳ ಅಂಕಿಸಂಖ್ಯೆಗಳನ್ನು ನಾವು ನೋಡಿದರೆ, ಇದು 25ರಿಂದ 30 ಪರ್ಸೆಂಟ್ ಜಾಸ್ತಿಯಾಗಿದೆ. 1972–73 ರಲ್ಲಿ 29 ಪರ್ಸೆಂಟ್ ಇತ್ತು, 1973–74ರಲ್ಲಿ 26 ಪರ್ಸೆಂಟ್ ಇತ್ತು, 1974-75ರಲ್ಲಿ ಇದು 31 ಪರ್ಸೆಂಟ್ ಆಗಿದೆ. ಒಟ್ಟು ಸಿಬ್ಬಂದಿಯ ಮೇಲೆ 25-30 ಪರ್ಸೆಂಟ್ ಖರ್ಚು ಇದೆ. ಸಿಬ್ಬಂದಿಯ ಖರ್ಚಿನ ಬಗ್ಗೆ ನಾವು ಯೋಚನೆ ಮಾಡುವಾಗ ಒಂದು ಮುಖ್ಯವಾದ ಸಂಗತಿಯನ್ನು ಗಮನದಲ್ಲಿಟ್ಟುಕೊಳ್ಳಬೇಕು. ಅದು ಏನೆಂದರೆ, ಸೋಷಿಯಲ್ ಡೆವಲಪ್‌ಮೆಂಟ್ ಆಕ್ಟಿವಿಟೀಸ್‌ನಲ್ಲಿ, ಎಜುಕೇಷನ್, ಹೆಲ್ತ್ ಇಲಾಖೆಗಳಲ್ಲಿ ಸಿಬ್ಬಂದಿ ಜಾಸ್ತಿಯಿರುತ್ತದೆ. ಸೋಷಿಯಲ್ ಡೆವಲಪ್‌ಮೆಂಟ್ ಆಕ್ಟಿವಿಟೀಸ್ ಜಾಸ್ತಿಯಾದರೆ ಸಿಬ್ಬಂದಿಯ ಖರ್ಚು ಕೂಡ ಜಾಸ್ತಿಯಾಗುತ್ತದೆ. ಅಂದ ತಕ್ಷಣ ನಾವು ಸಿಬ್ಬಂದಿಯ ಮೇಲೆ ಜಾಸ್ತಿ ಖರ್ಚು ಮಾಡುತ್ತೇವೆಂದು ತಿಳಿಯುವುದು ಸರಿಯಲ್ಲ. ಸಿಬ್ಬಂದಿ ಮೇಲೆ ಖರ್ಚು ಮಾಡುವುದನ್ನು ನಾವು ಅಡ್ಮಿನಿಸ್ಟ್ರೇಟೀವ್ ಎಕ್ಸ್‌ಪೆನ್ಸಸ್ ಎಂದು ನೋಡಬೇಕು. ನಮ್ಮ ರಾಜ್ಯದಲ್ಲಿ ಸಿಬ್ಬಂದಿಯ ಅಡ್ಮಿನಿಸ್ಟ್ರೇಟೀವ್ ಎಕ್ಸ್‌ಪೆನ್ಸ್‌ಗೆ ಎಷ್ಟು ಖರ್ಚು ಮಾಡುತ್ತೇವೆ ಎನ್ನುವುದನ್ನು ನೋಡಿದರೆ ಅದು ಬೇರೆ ಎಷ್ಟೋ ರಾಜ್ಯಗಳಿಗಿಂತ ಬಹಳ ಕಡಿಮೆ ಇದೆ. ಫಿನಾನ್ಸ್ ಆಫ್ ದಿ ಸ್ಟೇಟ್ ಗವರ್ನಮೆಂಟ್ಸ್ 74-75 ಎನ್ನುವ ರಿಸರ್ವ್ ಬ್ಯಾಂಕಿನವರ ಜರ್ನಲ್‌ನಲ್ಲಿ ಅವರು ಅಂಕಿಸಂಖ್ಯೆಗಳನ್ನು ತಯಾರು ಮಾಡಿದ್ದಾರೆ. ಅದರಲ್ಲಿ ಅಡ್ಮಿನಿಸ್ಟ್ರೇಟೀವ್ ಸರ್ವಿಸಸ್ ಪರ್ಸೆಂಟೇಜ್, ಮತ್ತು ಹೋಟಲ್ ಎಕ್ಸ್‌ಪೆಂಡೀಚರ್ ನಮ್ಮ ರಾಜ್ಯದ್ದು 74-75ರಲ್ಲಿ 8.1 ಪರ್ಸೆಂಟ್ ಮಾತ್ರ ಇತ್ತು. ಸಂಬಳದ ಬಹಳ ಭಾಗ ಎಜುಕೇಷನಲ್, ಮತ್ತು ಆರೋಗ್ಯ, ಸೋಷಿಯಲ್ ಸರ್ವೀಸಸ್ ಇರುತ್ತದೆ. ಅಡ್ಮಿನಿಸ್ಟ್ರೇಟೀವ್ ಹೋಟಲ್ ಎಕ್ಸ್‌ಪೆಂಡೀಚರ್ ಅನ್ನು ಹೋಟಲ್ ಪರ್ಸೆಂಟೇಜ್‌ಗೆ ಹೋಲಿಸಿ ನೋಡಿದರೆ ನಮ್ಮ ರಾಜ್ಯದ್ದು 8.1 ಪರ್ಸೆಂಟ್ ಮಾತ್ರ ಇದೆ. ಮಹಾರಾಷ್ಟ್ರದ್ದು 11.5 ಪರ್ಸೆಂಟ್, ಮಧ್ಯ ಪ್ರದೇಶದ್ದು 9 ಪರ್ಸೆಂಟ್, ಹರಿಯಾಣ 10.1 ಪರ್ಸೆಂಟ್, ಗುಜರಾತ್ ಮತ್ತು ಬಿಹಾರದ್ದು 10 ಪರ್ಸೆಂಟ್‌ಗಿಂತ ಜಾಸ್ತಿ ಇದೆ. ಅಸ್ಸಾಂದ್ದು 13 ಪರ್ಸೆಂಟ್

(ಶ್ರೀ ಎಂ. ಮೈ. ಘೋರ್ಪಡೆ)

ಇದೆ. ನಮ್ಮಗಿಂತ ಕಡಿಮೆ ಇರುವ ರಾಜ್ಯಗಳೆಂದರೆ, ಜಮ್ಮು ಕಾಶ್ಮೀರ, ಇದು 7.7 ಪರ್ಸೆಂಟ್ ಇದೆ. ಕೇರಳದ್ದು ನಮ್ಮಷ್ಟೇ ಇದೆ. ಟ್ಯಾಕ್ಸ್ ಕಲೆಕ್ಷನ್ ಎಕ್ಸ್ ಪೆಂಡೀಚರ್ ನಮ್ಮ ರಾಜ್ಯದ್ದು ಬಹಳ ಕಡಿಮೆ ಇದೆ. ಇದಕ್ಕೆ ನೇರವಾಗಿ ನಾವು ಎಷ್ಟು ಖರ್ಚು ಮಾಡುತ್ತೇವೆನ್ನುವುದನ್ನು ಲೆಕ್ಕ ಹಾಕಿಕೊಂಡರೆ ಆದು ಬಹಳ ಕಡಿಮೆ ಇದೆ. ಈ ರೀತಿಯಿಂದ ನಾವು ನೋಡಿದರೆ, ನಮ್ಮ ಆಡ್ಮಿನಿಸ್ಟ್ರೇಟೀವ್ ಎಕ್ಸ್‌ಪೆಂಡೀಚರ್ ಹತೋಟಿಯೊಳಗೆ ಇದೆ. ಡೆವಲಪ್‌ಮೆಂಟ್‌ಗೋಸ್ಕರ ನಾವು ಏನು ಹಣವನ್ನು ಖರ್ಚು ಮಾಡಿದ್ದೇವೆ, ಅದಕ್ಕೂ ಮತ್ತು ಇದಕ್ಕೂ ಹೋಲಿಸಿ ನೋಡಿದರೆ, ಇದನ್ನು ಬೇರೆ ರಾಜ್ಯಗಳಿಗೂ ಹೋಲಿಸಿ ನೋಡಿದರೆ, ನಮ್ಮ ರಾಜ್ಯದ ಅಡ್ಮಿನಿಸ್ಟ್ರೇಟೀವ್ ಎಕ್ಸ್‌ಪೆನ್ಸಸ್ ಜಾಸ್ತಿ ಏನೂ ಇಲ್ಲ ಎಂದು ನಾನು ಸ್ಪಷ್ಟವಾಗಿ ಹೇಳಬಯಸುತ್ತೇನೆ.

SRI T. R. SHAMANNA :—"The amount saved by Government by enforcing economy measures during the above periods" ಎಂದು ಕೇಳಿದ್ದಕ್ಕೆ 'No precise estimate of the savings is possible' ಎಂದು ಹೇಳಿದ್ದೀರಿ. ಇದರಿಂದಾಗಿ ಅನೇಕ ಇಲಾಖೆಗಳಲ್ಲಿ ಅನೇಕ ಕೆಲಸಕಾರ್ಯಗಳು ಆಗದೆ ಉಳಿದಿವೆ. ಎಕಾನಮಿ ಮೆಷರ್ ಅನ್ನು ತೆಗೆದು ಹಾಕಿ, ಅಥವಾ ಸಡಿಲ ಮಾಡಿ, ಅನುಕೂಲ ಮಾಡುವುದಕ್ಕೆ ಪ್ರಯತ್ನ ಮಾಡುತ್ತೀರಾ ?

ಶ್ರೀ ಎಂ. ಮೈ. ಘೋರ್ಪಡೆ :—ನನ್ನ ಬಡ್ಜೆಟ್ ಭಾಷಣದ 65ನೇ ಪ್ಯಾರಾಗ್ರಾಫ್ ಅನ್ನು ತಾವು ನೋಡಿದರೆ, ಈ ವರ್ಷದಲ್ಲಿ ರೆವಿನ್ಯೂ ಎಕ್ಸ್‌ಪೆಂಡೀಚರ್ 362 ಕೋಟಿ ರೂಪಾಯಿ ಇದ್ದರೆ ನಾವು ಖರ್ಚು ಮಾಡಿರುವುದು 369 ಕೋಟಿ ರೂಪಾಯಿಗಳು. ಅಂದರೆ, ಬಡ್ಜೆಟ್ಟಿನಲ್ಲಿ ಏನು ಇದೆಯೋ ಅದಕ್ಕಿಂತ 6 ಕೋಟಿ ರೂಪಾಯಿಗಳನ್ನು ಜಾಸ್ತಿ ಖರ್ಚುಮಾಡಿದ್ದೇವೆ. ಇದರಿಂದ ನಾವು ಎಕಾನಮಿ ಮೆಷರ್‌ನಿಂದ ಯಾವ ಕೆಲಸವನ್ನು ಮೊಟಕು ಮಾಡಿಲ್ಲ. ಆದಕ್ಕೂ ಜಾಸ್ತಿ ಖರ್ಚು ಮಾಡಿದ್ದೇವೆ, ಎನ್ನುವುದು ಸ್ಪಷ್ಟವಾಗಿ ಕಾಣುತ್ತದೆ. ಅಂದ ತಕ್ಷಣ ಎಕಾನಮಿ ಮಾಡಿಲ್ಲ ಎನ್ನುವ ಅಭಿಪ್ರಾಯ ಬರಬಾರದು. ಎಕಾನಮಿ ಮಾಡಿದ್ದೇವೆ ಮತ್ತು ಇದರ ಜೊತೆಗೆ 74-75 ರಲ್ಲಿ ಡಿ. ಎ. ಕೊಟ್ಟಿದ್ದೇವೆ. ಇದರಿಂದ ಸರ್ಕಾರಕ್ಕೆ 10 ಕೋಟಿ ರೂಪಾಯಿಗಳು ಜಾಸ್ತಿ ಖರ್ಚಾಗಿದೆ. ಪ್ಲಾನ್ ಹೆಸರಿನಲ್ಲಿ ಡೆವಲಪ್‌ಮೆಂಟ್ ಎಕ್ಸ್‌ಪೆಂಡೀಚರ್ ಬಡ್ಜೆಟ್ಟಿನಲ್ಲಿ ಎಷ್ಟು ಇದೆಯೋ ಅದಕ್ಕೂ ಜಾಸ್ತಿಯಾಗಿ ಖರ್ಚು ಆಗಿದೆ. ನಾನ್ ಪ್ಲಾನ್‌ನಲ್ಲಿಯೂ ನಾವು ಬಡ್ಜೆಟ್ಟಿನಲ್ಲಿ ಎಷ್ಟು ಹಣವನ್ನು ಒದಗಿಸಿದ್ದೇವೆಯೋ ಅದಕ್ಕಿಂತ ಆರು ಕೋಟಿ ರೂಪಾಯಿಗಳನ್ನು ಮೂತ್ರ ಜಾಸ್ತಿ ಖರ್ಚು ಮಾಡಿದ್ದೇವೆ. ಪ್ಲಾನ್ ಎಕ್ಸ್‌ಪೆಂಡೀಚರ್ ಜಾಸ್ತಿಯಾದರೂ ಕೂಡ

ಟೋಟಲ್ ರೆವಿನ್ಯೂ ಎಕ್ಸ್‌ಪೆಂಡೀಚರ್‌ನಲ್ಲಿ ಮಿತಿಮೀರಿ ಹೋಗಲಿಕ್ಕೆ ನಾವು ಬಿಟ್ಟಿಲ್ಲ. ಇದರ ಜೊತೆಗೆ ನಾನ್ ಪ್ಲಾನ್‌ನಲ್ಲಿ ಎಕಾನಮಿ ಮೂಡುವ ಪ್ರಯತ್ನ ವನ್ನು ನಾವು ಮೂಡದೆ ಇದ್ದರೆ, ಇಷ್ಟೊಂದು ಡಿ. ಎ. ಕೊಟ್ಟಿರುವಾಗ ಇನ್ನೂ ಅಷ್ಟು ಜಾಸ್ತಿ ಖರ್ಚಾಗುತ್ತದೆ. ಎಕಾನಮಿ ಮೆಷರ್ ಅನ್ನು ಇಟ್ಟಿದ್ದರೂ ಸಹ ಬಡ್ಜೆಟ್ಟಿನಲ್ಲಿ ಎಷ್ಟು ಹಣವನ್ನು ಒದಗಿಸಿದ್ದೀವೆಯೋ ಅದಕ್ಕೂ ಜಾಸ್ತಿ ಹಣವನ್ನು ನಾವು ಖರ್ಚು ಮೂಡಿದ್ದೀವೆ.

* *Nationalisation of Routes in Tumkur District*

254 SRI B. BYRAPPAJI (Turuvekere) :—

Will the Minister for Transport and Tourism be pleased to state :—

(*a*) the number of routes nationalised in each taluk of Tumkur District ;

(*b*) whether the Karnataka State Road Transport Corporation is playing their buses in each of the nationalised routes in accordance with the needs and convenience of the public ;

(*c*) if not, the arrengements that would be made to provide facilities to the people by plying more number of buses ?

SRI MOHAMMED ALI (Minister for Transport and Tourism) :—

(*a*) Routes are not nationalised in Tumkur District talukwise but they are Intra-regional (District) or inter-regional. Six intraregional routes and forty-six inter-regional routes have been nationalised.

(*b*) Yes.

(*c*) Does not arise in view of reply to clause (*b*) above.